JSFB/SEC/2024-25/85

18th September 2024

**National Stock Exchange of India Ltd.**
**Exchange Plaza, C-1, Block G,**
**Bandra Kurla Complex, Bandra (East),**
**Mumbai 400051.**

**BSE Limited**
**Phiroze Jeejeebhoy Towers,**
**Dalal Street,**
**Mumbai 400001.**

**Sub:** Newspaper Advertisement – Notice of Postal Ballot

**Ref:** Pursuant to Regulation 30 and 47 of SEBI (Listing Obligations and Disclosure Requirements) Regulations, 2015

---

Dear Sir/Madam,

Pursuant to Regulation 30 and Regulation 47 read with Schedule III Part A Para A of SEBI (Listing Obligations and Disclosure Requirements) Regulations, 2015, we hereby enclose copies of newspaper advertisement published in the Business Standard in English Language and Vishwavani in Kannada Language on Wednesday, September 18, 2024, regarding Postal Ballot Notice and Remote e Voting information.

You are requested to kindly take the same on your record and oblige.

**Thank you**
**Yours faithfully**
**For Jana Small Finance Bank Limited**

LAKSHMI RAJA NARAYANAMURTHY
Digitally signed by LAKSHMI RAJA NARAYANAMURTHY
Date: 2024.09.18 15:55:05 +05'30'

**Lakshmi R N**
**Company Secretary & Compliance Officer**



**Registered Office:**
**Jana Small Finance Bank Limited**
The Fairway Business Park, # 10/1, 11/2 & 12/2B, Off Domlur, Koramangla Inner Ring Road, Next to Embassy Golf Links, Challaghatta, Bengaluru -560071.
**CIN No.** U65923KA2006PLC040028

**T** +91 80 4602 0100
**E** info@janabank.com
**W** www.janabank.com

# Lenovo to roll out AI servers in India

## Unit based in Puducherry; R&D lab to come up in Bengaluru

ANEEKA CHATTERJEE
Bengaluru, 17 September

Beijing-headquartered Lenovo on Tuesday said its Indian plant has started manufacturing AI-powered servers, a news which was complemented by another major announcement that the Chinese PC maker will set up a research and development (R&D) lab in Bengaluru -- which will be the fourth globally.

Lenovo's production plant in Puducherry will manufacture 50,000 enterprise AI servers and 2,400 high-end GPU units annually.

The Puducherry plant is an existing hub for the company, and will cater to both the domestic and international demand. Company executives in an event on Tuesday in Bengaluru said that over 60 per cent of production is set for export across the Asia-Pacific region.

The plant will manufacture five key offerings, including three rack-mounted enterprise AI servers and two flagship 8-way GPU servers.

Amar Babu, President-Asia Pacific, Lenovo said, "This development marks a significant step toward achieving both Lenovo's and the Indian government's 'AI for All' vision. We remain committed to driving India's growth as an innovation hub by expanding our global manufacturing footprint and harnessing the strength of Indian talent and the industry ecosystem for technology R&D."

Lenovo also announced the setting up of an AI-led R&D lab in Bengaluru. It is the fourth such infrastructure and R&D lab globally. The other three are in Morrisville, US, Beijing and Taipei. This lab will focus on all future server designs, developments, and technical initiatives, reinforcing its commitment to R&D. These developments are part of the $1 billion investment over the next three -years that the company announced in 2023.

"We are excited about the growth potential this brings, not just for Lenovo, but for India as a global innovation hub," said Amit Luthra, managing director, Lenovo ISG India.

Lenovo established manufacturing in India nearly two decades ago and began Motorola in India about a decade ago. Recently, it achieved key milestones, including launching a Global Shared Support Center and PMA-compliant PCs with made-in-India motherboards.

"Our commitment to developing local talent and supporting India's tech economy is long-term. With today's announcement of AI server manufacturing in India, we complete Lenovo's pocket-to-cloud technologies 'Made in India' for the world. The Infrastructure R&D Lab's focus on designing and developing next-generation mainstream servers further underscores Lenovo's dedication to 'R&D in India for the world," said Shailendra Katyal, managing director, Lenovo India.

> "WITH TODAY'S ANNOUNCEMENT OF AI SERVER MANUFACTURING IN INDIA, WE COMPLETE LENOVO'S POCKET-TO-CLOUD TECHNOLOGIES 'MADE IN INDIA' FOR THE WORLD"
>
> **Shailendra Katyal,** Managing Director, Lenovo India



# Delhi, Mumbai airports emerge as key LCC hubs

## But long way to move up on global mega hub chart: OAG

SURAJEET DAS GUPTA
New Delhi, 17 September

India's aspiration to turn Delhi and Mumbai into global mega hubs — among the world's most connected international airports — remains a distant and difficult goal. However, progress is being made on a different front, as both airports are emerging as key international hubs for low-cost carriers (LCCs), where airports in the Asia-Pacific (APAC) region already lead the charge.

According to global travel data provider OAG, Delhi airport ranks 24th among the world's top 50 mega hubs (for the period between September 2023 to August 2024), a modest improvement of one spot from 2023. Meanwhile, Mumbai airport, constrained by capacity, has slipped sharply from 33rd to 44th in the same period.

The rankings are based on the ratio of international connections to the number of destinations served, factoring in both the number of international flights and the frequency of flights on each route — key elements in building a global mega hub.

At both Indian airports, IndiGo reigns supreme. In Delhi, it accounts for 31 per cent of the 21,781 international connections, covering over 156 destinations. In Mumbai, IndiGo controls an even larger 41 per cent of the 12,849 international connections across 127 destinations.

London, dominated by British Airways, remains the top global mega hub, with 50 per cent of its 61,356 international connections reaching 227 destinations. Meanwhile, Kuala Lumpur has jumped to the second spot (from fourth a year ago and 12th in 2019), thanks to AirAsia, which manages 35 per cent of the 33,411 connections to 137 destinations from Malaysia's main airport.

Delhi, however, still trails behind major hubs like Bangkok, Singapore, Manila, Jakarta, and Bogotá. Yet, OAG notes a gradual shift toward Asia in the top 20 global mega hubs, with eight of them now located in APAC, reflecting the region's growing importance in global connectivity. India's position as a mega-hub for LCCs, however, has improved.

Delhi now ranks fifth among the top 25 global LCC hubs, trailing Kuala Lumpur, Manila, Incheon (South Korea), and Singapore — moving up one spot from last year, largely driven by IndiGo's aggressive international expansion. Mumbai, meanwhile, holds steady at 11th, with IndiGo continuing to dominate.

APAC airports maintain a firm grip on the LCC mega hub market, accounting for 64 per cent of the top 25 LCC hubs worldwide.

This includes eight airports in Southeast Asia, five in Northeast Asia, two in South Asia — Delhi and Mumbai — and one in the Southwest Pacific (Sydney).

### TASK CUT OUT

**Key global mega hub airports** (In %)

| Rank | Airport | Dominant airline | Market share of all flights |
|---|---|---|---|
| 1 | London | British Airways | 50 |
| 2 | Kuala Lumpur | Air Asia | 35 |
| 3 | Tokyo | Japan Airlines | 35 |
| 24 | Delhi | IndiGo | 39 |
| 44 | Mumbai | IndiGo | 41 |

Source: OAG

**Top mega hubs of low-cost carriers** (In %)

| Rank | Airport | Dominant carrier | Market share of all flights |
|---|---|---|---|
| 1 | Kuala Lumpur | Air Asia | 35 |
| 2 | Manila | Cebu Pacific | 32 |
| 3 | Incheon | Korean Air | 22 |
| 5 | Delhi | IndiGo | 39 |
| 11 | Mumbai | IndiGo | 41 |

Source: OAG

# A-I to upgrade 27 old A320neo aeroplanes by mid-2025

DEEPAK PATEL
New Delhi, 17 September

Air India (A-I) on Tuesday said it would completely upgrade its 27 "legacy" A320neo planes by mid-2025, following which it would begin retrofitting 40 "legacy" wide-body planes.

Legacy planes have been part of Air India's fleet before the Tata Group took control of the airline in January 2022.

The "refit project", which has commenced now, will be coordinated by Air India's engineering team with leading global equipment makers such as Collins, Astronics and Thales, among others, Air India said.

"The exercise will see the installation of over 15,000 next-generation seats across premium economy, business and economy classes," it added.

The first narrowbody aircraft to be in the refit programme is VT-EXN, a single-aisle A320neo that went into the hangar on Monday.

"After prototyping and necessary regulatory approvals, VT-EXN is expected to re-enter commercial service in December 2024. It will join the eight recently-delivered and operational Air India A320neo aircraft that already feature the upgraded cabin interiors and configuration," it added.

Following VT-EXN, between three and four aircraft per month will undergo retrofit, with the full narrowbody fleet expected to be upgraded by the middle of 2025, it added.

Air India currently operates a fleet of 142 aircraft, including approximately 60 wide-body planes.

The fleet also consists of 11 B777 aircraft and 25 A320 family planes leased by the airline.

# Gilead wants HIV drug patented


ANJALI SINGH
Mumbai, 17 September

The Indian Patent Office is set to hear objections against patent claims filed by US-based pharmaceutical giant Gilead Sciences on HIV prevention drug "Lenacapavir". Sankalp Rehabilitation Trust, a civil society organisation working with vulnerable populations, argues that the patent applications could impact access to affordable treatment in India and would hinder access to affordable generic versions of the drug.

On Thursday (September 19), the Indian Patent Office will hear objections filed by Sankalp against Gilead's applications, the organisation claimed.

Sankalp contends that Gilead's claims on Lenacapavir are not innovative and violate India's patent laws, which prevent the practice of "evergreening" — extending monopolies on drugs through minor, unoriginal modifications.

At the heart of the dispute is Lenacapavir, an injectable HIV drug taken twice yearly, which has demonstrated superior efficacy in preventing HIV compared to existing oral treatments. According to UN agency UNAIDS, Lenacapavir has the potential to play a critical role in ending AIDS, provided it is made widely accessible.



Gilead is seeking patents in India for the choline and sodium salt forms of Lenacapavir. If approved, these patents would extend Gilead's monopoly over the drug in India until 2038. Sankalp and other public health advocates argue that granting such patents would block the production of more affordable generic versions of the drug, limiting access to the drug for millions of people who need it.

"Granting these patents could hinder access to affordable Lenacapavir, making it impossible for India to produce the generic version that could save lives globally," said Eldred Tellis, director of Sankalp. "Access to affordable medicines is a life or death issue, and India's patent offices have the power to decide this," Tellis said.

Gilead's price for Lenacapavir in high-income countries is $42,250 annually, but researchers estimate that Indian generic manufacturers could produce the drug for as little as $100 per person per year, with further reductions possible as demand increases. Indian generic drug-makers, known for producing affordable treatments for HIV, already have the capacity to mass-produce Lenacapavir, but the patent dispute could slow down the process.

The opposition to Gilead's patent applications in India is part of a larger global movement. Public health groups in countries, including Argentina, Thailand, and Vietnam, have filed a total of nine patent challenges against Lenacapavir, as part of the "Make Medicines Affordable" campaign.

# E-bike market hots up with Revolt RV1 launch

NITIN KUMAR
New Delhi, 17 September

Haryana-based Revolt Motors on Tuesday launched its first electric motorcycle (e-motorcycle) in the commuter segment, the RV1, priced at an introductory ₹84,990. The launch follows electric scooter market leader Ola Electric's unveiling of its Roadster series e-bike last month, which starts at ₹74,999.

Both companies have undercut the previous lowest price in the category, which stood at ₹1,10,000.

Revolt Motors also introduced a premium variant, the RV1+, priced at ₹99,990. The RV1 offers two battery options: a 2.2 kWh battery with a range of up to 100 km, and a 3.24 kWh battery extending the range to 160 km.

This marks Revolt Motors' fourth product in its line-up, which already includes the RV400 and RV400 BRZ models. The company plans to expand its portfolio with the launch of one new product each year for the next five years.

# DGCA probes IndiGo tail strike, derosters crew

Aviation watchdog Directorate General of Civil Aviation (DGCA) is probing the incident of tail strike involving an IndiGo aircraft on September 9 and the flight crew has been derostered, a senior official said on Tuesday.

In a statement, IndiGo said its A321 aircraft was grounded in Bangalore due to a tail strike on September 9.

It was operating the flight from Delhi to Bengaluru.

"The aircraft is currently under maintenance and will be back in operation post necessary repairs. The incident is under investigation," the airline said.. PTI





50 years of converting news into economic intelligence.

50 Years of Insight

businessstandard bsindia business.standard business-standard.com



**JANA SMALL FINANCE BANK**
(A Scheduled Commercial Bank)
CIN No. L65923KA2006PLC040028
Regd Office: The Fairway Business Park #10/1, 11/2, 12/2B, Off Domlur, Koramangala Inner Ring Road, Next to EGL, Challaghatta, Bengaluru - 560071.
Tel: +91 - 8046020100; Email: info@janabank.com; Website: www.janabank.com

**NOTICE OF POSTAL BALLOT**

Members are hereby informed that pursuant to the provisions of Section 108 and 110, and other applicable provisions of the Companies Act, 2013, as amended, read together with the Companies (Management and Administration) Rules, 2014, as amended and other general circulars issued in this regard by the Ministry of Corporate Affairs ("MCA"), Government of India, Secretarial Standards on General Meetings issued by the Institute of Company Secretaries of India, Regulation 44 of the Securities and Exchange Board of India (Listing Obligations and Disclosure Requirements) Regulations, 2015, as amended (the "Listing Regulations") and any other applicable law, Rules and Regulations (including any statutory modification(s) or re-enactment(s) thereof, for the time being in force), the approval of Members of Jana Small Finance Bank Limited ("Company/Bank") is sought for the following special resolution by way of remote e-voting (e-voting") process:

| S. No. | Description of special resolution |
|---|---|
| 1. | Appointment of Mr. Dinesh C Patwari (DIN: 10060352) as a non - executive Independent Director of the Bank |

Pursuant to the MCA circulars, the Bank has completed the dispatch of electronic copies of the Postal Ballot Notice along with explanatory statement on Tuesday, 17th September 2024 through electronic mode to those Members whose email addresses are registered with the Bank/ depository participant(s) as on Friday, 13th September 2024 ("cut-off date").

The Postal Ballot Notice is also available on the website of the Bank at www.janabank.com, the relevant section of the website of BSE Limited: www.bseindia.com and National Stock Exchange of India: www.nseindia.com and on the website of National Securities Depository Limited: www.evoting.nsdl.com.

In accordance with the MCA circulars, Members can vote only through e-voting process. The voting rights of the Members shall be reckoned on the basis of the equity shares of the Bank held by them as on the cut-off date. Any person who is not a Shareholder of the Bank, as on the Cut-off date shall treat the Postal Ballot Notice for information purposes only.

The Company has engaged the services of National Securities Depository Limited ("NSDL"), as the agency to provide e-voting facility. The remote e-voting period shall commence on Wednesday, 18th September 2024 at 09:00 AM (IST). Members are requested to cast their vote through remote e-voting at anytime before 05:00 PM (IST) on Thursday, 17th October 2024 (i.e. the last date to cast vote electronically). The remote e-voting module shall be disabled thereafter. The last day of voting i.e. on Thursday, 17th October 2024, shall be the date on which the resolution would be deemed to have been passed, if approved by requisite majority.

Shareholders are requested to update their mobile number and email ID correctly in their demat account in order to access e-Voting facility.

The Board of Directors in through circulation dated 13th September 2024, has appointed Mr. Nagendra D Rao, Practicing Company Secretary (FCS No. 5553; CP No. 7731) as the Scrutinizer for conducting the Postal Ballot through remote e-voting process in a fair and transparent manner.

In case of any queries, you may refer the Frequently Asked Questions (FAQs) for Shareholders and e-voting user manual for Shareholders available at the download section of www.evoting.nsdl.com or call on: 022 - 4886 7000 or send a request to Mr. Falguni at evoting@nsdl.com.

The Scrutinizer will submit his report, after the completion of scrutiny, to the Chairman of the Bank or any person authorized by him. The results of the Postal Ballot along with the Scrutinizer's Report will be announced within two working days from the conclusion of the voting period and the same will be displayed on the Company's website www.janabank.com and on the website of NSDL at www.evoting.nsdl.com and will also be submitted to the BSE Limited and National Stock Exchange of India Limited, Stock Exchanges where Equity Shares of the Bank are listed.

Contact details of the person responsible to address the queries/grievances connected with the voting by Postal Ballot including voting by electronic means, if any:

**Mrs. Lakshmi R N**
**Company Secretary & Compliance Officer**
**Jana Small Finance Bank Limited**
**The Fairway Business Park, First Floor, # 10/1, 11/2 & 12/2B Off Domlur,**
**Koramangala Inner Ring Road, Next to EGL Business Park, Challaghatta, Bengaluru - 560071**
**Tel: +91- 8046020100; Email: investor.grievance@janabank.com**

By the order of the Board
For JANA SMALL FINANCE BANK LIMITED

Date: 18th September 2024
Place: Bengaluru

Lakshmi R N
Company Secretary & Compliance Officer



**Philips India Limited**
Registered Office: 3rd Floor, Tower A,
DLF IT Park, 08 Block AF, Major Arterial Road,
New Town (Rajarhat), Kolkata, West Bengal- 700156
CIN: U31902WB1930PLC006663,
Phone: +91 124 4606000 Fax: +91 124 4606666, Website: www.philips.com

**NOTICE TO THE SHAREHOLDERS OF THE COMPANY**

**For Transfer of Equity shares to the Investor Education and Protection Fund ("IEPF") Authority**

Pursuant to Section 124(5) of the Companies Act, 2013 ("Act"), any money transferred to the Unpaid Dividend Account of the Company, which remains unpaid or unclaimed for a period of seven (7) years from the date of such transfer shall be transferred to the IEPF (Investor Education and Protection Fund) established by Central Government.

Further, pursuant to the provisions of Section 124(6) of the Act read with the Investor Education and Protection Fund Authority (Accounting, Audit, Transfer and Refund) Rules, 2016 ("IEPF Rules"), the Company is also required to transfer the shares, in respect of which the dividend remains unpaid or unclaimed for a period of seven (7) consecutive years or more, to the Demat Account of IEPF Authority.

A separate communication has been sent at the registered address of all shareholders who have not claimed/encashed dividends for the FY 2016-17 and all subsequent dividend declared by the Company and whose shares are liable to be transferred to the Demat Account of IEPF Authority under the IEPF Rules. The details of such shareholders (including the names of shareholders and their folio no. or DP ID/Client ID) have been uploaded on the website of the Company (www.philips.co.in) under the section 'Investor Relations' at https://www.philips.com.The shareholders may access the website of the Company to verify the details of the shares liable to be transferred to IEPF Authority.

The concerned shareholders holding shares in physical form and whose shares are liable to be transferred to IEPF Authority may note that the Company would be issuing new share certificate(s) in lieu of original share certificates held by them for dematerialization followed by transfer of shares to IEPF Authority as per IEPF Rules. Upon such issue, the original share certificate which stand registered in the name of shareholder will be deemed cancelled and non-negotiable. In case the shares are held in Demat form, the Company shall transfer the shares by way of corporate action through the Depositories to the IEPF Authority.

Shareholders are requested to forward the requisite documents as per above-mentioned communication, to the Company's Registrar and Share Transfer Agent i.e. Kfin Technologies Limited to claim the shares and unclaimed dividend. In case the dividend is not claimed by December 20, 2024, those equity share(s) in respect of which the dividend remains unclaimed shall be transferred to IEPF Authority, in the manner provided under IEPF Rules, on the due date, in accordance with the notification(s) issued by the Ministry of Corporate Affairs from time to time, without any further notice and no liability shall lie against the Company in respect of the equity shares so transferred.

Please note that both the unclaimed dividend and corresponding shares including all benefits accruing on such equity shares, if any, once transferred to IEPF can be claimed back only from IEPF Authority after following the procedure prescribed under the IEPF Rules.

It may please be noted that no claim shall lie against the company in respect of shares and unclaimed dividends transferred to IEPF Authority and future dividend, if any in respect of the shares transferred. Shareholders may claim the shares and/or dividends transferred to IEPF by making application to IEPF in form IEPF-5 as per the rules. The said form is available on the website of IEPF viz . www. Iepf.gov.in.

For any queries in respect of the above, shareholders may contact the Company at :

M/s KFIN TECHNOLOGIES LIMITED
Unit : Philips India Limited
Selenium Tower B, Plot 31-32, Gachibowli,
Financial District, Nanakramguda,Hyderabad – 500 032
Toll Free No.: 91 40 6716 2222
Email : einward.ris@karvy.com

For Philips India Limited
Dev Kumar Tripathy
Whole-time Director & CFO
DIN No.:10373357

Place: Gurugram
Dated: 17.09.2024

## ಸಮಾಚಾರ ಸಣ್ಣದಲ್ಲ

### ಪೋಲಿಯೊ ಲಸಿಕೆಗೆ ತಾಲಿಬಾನ್ ಅಡ್ಡಿ

**ಕಾಬೂಲ್:** ಅಫ್ಘಾನಿಸ್ತಾನದಲ್ಲಿ ಪೋಲಿಯೊ ಲಸಿಕೆ ಅಭಿಯಾನಕ್ಕೆ ತಾಲಿಬಾನ್ ತಡೆಯೊಡ್ಡಿದೆ ಎಂದು ವಿಶ್ವಸಂಸ್ಥೆ ಹೇಳಿದೆ. ಪೋಲಿಯೊದಿಂದಾಗಿ ಪಾರ್ಶ್ವವಾಯು ಸಮಸ್ಯೆ ಅಫ್ಘಾನಿಸ್ತಾನದಲ್ಲಿ ದೊಡ್ಡದಾಗಿದೆ. ಅದಕ್ಕೆ ಅಂತ್ಯಹಾಡಲು ಆಡಳಿತ ಸಹಕರಿಸುತ್ತಿಲ್ಲ. ಲಸಿಕೆ ನಿಷೇಧಕ್ಕೆ ತಾಲಿಬಾನ್ ಕಾರಣವನ್ನೂ ತಿಳಿಸಿಲ್ಲ ಎಂದು ವಿಶ್ವಸಂಸ್ಥೆ ಅಸಮಾಧಾನ ವ್ಯಕ್ತಪಡಿಸಿದೆ.

### ಹಿಜಾಬ್ ಕೈಬಿಟ್ಟು, ಕೇಶ ಹರಡಿದ ಇರಾನ್ ವನಿತೆ

**ಟೆಹರಾನ್:** ಇರಾನ್‌ನಲ್ಲಿ ಹಿಜಾಬ್ ವಿರುದ್ಧ ದೊಡ್ಡ ಪ್ರತಿಭಟನಾ ಅಭಿಯಾನಕ್ಕೆ ಕಾರಣರಾದ 22ರ ಹರೆಯದ ಮೆಹ್ಸಾ ಅಮೀನಿ 2ನೇ ವರ್ಷದ ಪುಣ್ಯಸ್ಮರಣೆ ಭಾಗವಾಗಿ ಇರಾನ್ ವನಿತೆಯರು ತಲೆಯಿಂದ ಹಿಜಾಬ್ ತೆಗೆದೆಸೆದು, ತಲೆಗೂದಲನ್ನು ಬೆನ್ನು-ಭುಜದ ಮೇಲೆ ಹರವಿಕೊಂಡು ಬೀದಿಗಿಳಿದು ಗಮನ ಸೆಳೆದಿದ್ದಾರೆ. ಮಹಿಳೆಯರು ಕೇಶ ಸ್ವಚ್ಛಂದ ಹಾರಾಡಲು ಬಿಟ್ಟು 'ಜೀವನ ಮತ್ತು ಸ್ವಾತಂತ್ರ್ಯ'ದ ಘೋಷಣೆ ಕೂಗುತ್ತಾ ಸೋಮವಾರ ಟೆಹರಾನ್‌ನ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ್ದಾರೆ. ಆಯತುಲ್ಲಾ ಅಲಿ ಖೊಮೇನಿ ಸರಕಾರಕ್ಕೆ ಸವಾಲೆಸೆದಿದ್ದಾರೆ. ಜೈಲಿನಲ್ಲಿರುವ ಮಹಿಳೆಯರಲ್ಲಿ ಹಲವರು ಉಪವಾಸ ಕೈಗೊಂಡು ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಇದಕ್ಕೆ ಅಪಾರ ಬೆಂಬಲ ವ್ಯಕ್ತವಾಗಿದೆ.

### ಕಾಶ್ಮೀರದಲ್ಲಿ ಇಂದು ಮೊದಲ ಹಂತ ಮತ

**ಶ್ರೀನಗರ:** ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರ ವಿಧಾನಸಭೆಗೆ ಬುಧವಾರ ಮೊದಲ ಹಂತದ ಮತದಾನ ನಡೆಯುತ್ತಿದೆ. ಕಾಶ್ಮೀರದ 4 ದಕ್ಷಿಣ ಜಿಲ್ಲೆಗಳು ಮತ್ತು ಬಿಜ್‌ಬೆಹೆರಾದ 24 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿದ್ದು 23 ಲಕ್ಷ ಮತದಾರರು ಹಕ್ಕು ಚಲಾಯಿಸಲಿದ್ದಾರೆ. ಕೇಂದ್ರ ಸಶಸ್ತ್ರ ಅರೆ ಸೇನಾಪಡೆ, ಜಮ್ಮು ಮತ್ತು ಕಾಶ್ಮೀರ ಸಶಸ್ತ್ರ ಪಡೆ ಮತ್ತು ಜಮ್ಮು ಕಾಶ್ಮೀರ ಪೊಲೀಸ್ ಭದ್ರತೆಗೆ ನಿಯೋಜನೆಗೊಂಡಿದ್ದು, ಚುನಾವಣೆ ನಿರ್ಭೀತಿ, ಶಾಂತಿಯುತ ನಡೆಸಲು 3 ಹಂತದ ಭದ್ರತೆ ಒದಗಿಸಲಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಣೆ | ಪ್ರಥಮ ಡಿಜಿಟಲ್ ಗಣತಿಗೆ ವೆಬ್‌ಪೋರ್ಟಲ್
ಜಾತಿ ಗಣತಿಗೂ ಅವಕಾಶ ಸಂಭವ | ಜನತೆ ಮಾಹಿತಿಗೆ ಆಧಾರ್, ಮೊಬೈಲ್ ಸಂಖ್ಯೆ

# ಶೀಘ್ರವೇ ಡಿಜಿಟಲ್ ಜನಗಣತಿ


**ದೆಹಲಿ:** ದೇಶದಲ್ಲಿ ಶೀಘ್ರದಲ್ಲೇ ಜನಗಣತಿ ನಡೆಯಲಿದೆ, ಅದೂ ಡಿಜಿಟಲ್ ಮಾರ್ಗದಲ್ಲಿ ನಡೆಸಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ 3.0 ಸರಕಾರ 100 ದಿನಗಳನ್ನು ಪೂರೈಸಿದ ಹಿನ್ನೆಲೆ ದೆಹಲಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಸಚಿವರನ್ನು ಸುದ್ದಿಗಾರರ ಜನಗಣತಿ ಕುರಿತ ಪ್ರಶ್ನೆ ಕೇಳಿದಾಗ, 'ಶೀಘ್ರದಲ್ಲೇ ಜನಗಣತಿ ದಿನಾಂಕ ಘೋಷಿಸುತ್ತೇವೆ' ಎಂದು ಉತ್ತರಿಸಿದರು. ಆದರೆ, ಯಾವಾಗ ಆರಂಭ ಎಂಬ ಸ್ಪಷ್ಟ ಮಾಹಿತಿ ನೀಡಲಿಲ್ಲ. 2011ರಂದು ದೇಶದಲ್ಲಿ ಜನಗಣತಿ ನಡೆದಿದ್ದು, 2021ರಲ್ಲಿ ನಡೆಸಬೇಕಿದ್ದ ಜನಗಣತಿ ಕರೋನಾ ಸೋಂಕು ದೇಶಾದ್ಯಂತ ವ್ಯಾಪಿಸಿದ ಕಾರಣ ಮುಂದೂಡಿಕೆಯಾಯಿತು.

1881ರಲ್ಲಿ ದೇಶದಲ್ಲಿನ ಜನಗಣತಿ ಆರಂಭಗೊಂಡಿದೆ. ಬಳಿಕ ಪ್ರತಿ 10 ವರ್ಷಗಳಿಗೊಮ್ಮೆ ಜನಗಣತಿ ನಡೆಯುತ್ತಿದೆ. ದಶವಾರ್ಷಿಕ ಜನಗಣತಿಯ ಮೊದಲ ಹಂತ 2020ರ ಏ.1ರಂದು ಆರಂಭವಾಗಬೇಕಿತ್ತು. ಆದರೆ ಕೋವಿಡ್-19 ಸಾಂಕ್ರಾಮಿಕ ರೋಗದ ಕಾರಣ ಮುಂದೂಡಬೇಕಾಯಿತು ಎಂದರು.

ಜಾತಿ ಆಧಾರಿತ ಜನಗಣತಿ ಬಗೆಗೂ ಸಚಿವ ಶಾ ಮಾತನಾಡಿದರು. ಜನಗಣತಿ ನಡೆಸಲು ಆರಂಭಿಸಿದಾಗ ಅದು ಹೇಗೆ ನಡೆಯುತ್ತದೆ ಎಂಬ ಎಲ್ಲಾ ಮಾಹಿತಿಯನ್ನೂ ಸಾರ್ವಜನಿಕಗೊಳಿಸುತ್ತೇವೆ ಎಂದು ಹೇಳಿದರು. ಜಾತಿ ಆಧಾರಿತ ಜನಗಣತಿ ನಡೆಸಬೇಕೆಂಬ ರಾಜಕೀಯ ಪಕ್ಷಗಳ ಆಗ್ರಹದ ನಡುವೆಯೇ ಶಾ ಅವರಿಂದ ಈ ಹೇಳಿಕೆ ಬಂದಿರುವುದು ಗಮನಾರ್ಹ. ಕೇಂದ್ರ ಸರಕಾರದ ವಿವಿಧ ಸಂಸ್ಥೆಗಳು 2011ರ ಜನಗಣತಿ ಆಧರಿಸಿಯೇ ನೀತಿಗಳನ್ನು ರೂಪಿಸುತ್ತಿವೆ. ಅದೇ ಆಧಾರದಲ್ಲೇ ಸಬ್ಸಿಡಿ ಮೊದಲಾದ ಆರ್ಥಿಕ ನೆರವನ್ನೂ ಹಂಚಿಕೆ ಮಾಡುತ್ತಿವೆ ಎಂದು ಮತ್ತೊಂದು ಪ್ರಶ್ನೆಗೆ ಸಚಿವ ಶಾ ಉತ್ತರಿಸಿದರು.

ವಕ್ಫ್ ತಿದ್ದುಪಡಿ ವಿಧೇಯಕಕ್ಕೆ ಸಂಸತ್ತಿನ ಉಭಯ ಸದನಗಳಲ್ಲಿ ಶೀಘ್ರವೇ ಅಂಗೀಕಾರ ಪಡೆಯಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಶಾ ಉತ್ತರಿಸಿದರು. ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಜಂಟಿ ಸುದ್ದಿಗೋಷ್ಠಿಯಲ್ಲಿದ್ದರು.



#### 12 ಸಾವಿರ ಕೋಟಿ ರು. ವೆಚ್ಚದ ಅಂದಾಜು

ಈ ಬಾರಿಯ ಜನಗಣತಿ ಸಂಪೂರ್ಣ ಪ್ರಮಾಣದ್ದಾಗಿರಲಿದೆ. ಅಲ್ಲದೇ, ಡಿಜಿಟಲ್ ಶೈಲಿಯಲ್ಲಿ ನಡೆಯಲಿದೆ. ಜನಗಣತಿ ಮತ್ತು ಎನ್‌ಪಿಆರ್ ಪ್ರಕ್ರಿಯೆಗೆ ಕೇಂದ್ರ ಸರಕಾರ ಅಂದಾಜು 12 ಸಾವಿರ ಕೋಟಿ ರು.ಗೂ ಅಧಿಕ ಹಣ ವೆಚ್ಚ ಮಾಡುವ ಸಾಧ್ಯತೆಯಿದೆ ಎಂದು ಕೇಂದ್ರ ಸರಕಾರದ ಅಧಿಕಾರಿಗಳು ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿದ್ದಾರೆ. ಇದು ದೇಶದ ಮೊದಲ ಡಿಜಿಟಲ್ ಜನಗಣತಿಯಾಗಲಿದೆ. ಅದಕ್ಕಾಗಿ ಜನಗಣತಿ ಪ್ರಾಧಿಕಾರ 'ಸ್ವಯಂ ಗಣತಿ' ಪೋರ್ಟಲ್ ಸಿದ್ಧಪಡಿಸಿದ್ದು, ಅದು ಇನ್ನಷ್ಟೇ ಬಿಡುಗಡೆ ಆಗಬೇಕಿದೆ. ಸ್ವಯಂ ಜನಗಣತಿ ಸಂದರ್ಭ ಜನರ ಆಧಾರ್ ಅಥವಾ ಮೊಬೈಲ್ ಸಂಖ್ಯೆ ಕಡ್ಡಾಯವಾಗಿರಲಿದೆ. ಜನರು ಸ್ವತಃ ನಾಗರಿಕರು ತಮ್ಮನ್ನು ತಾವು ಎಣಿಸುವ ಅವಕಾಶವನ್ನು ಪಡೆಯುತ್ತಾರೆ ಎಂದು ಅಧಿಕಾರಿ ವಿವರ ನೀಡಿದ್ದಾರೆ.

#### ಮಣಿಪುರ 'ಶಾಶ್ವತ' ಶಾಂತಿಗಾಗಿ ಮೈತೇಯಿ-ಕುಕಿ ಜತೆ ಮಾತು

ದೆಹಲಿ: ಮಣಿಪುರದಲ್ಲಿ ಶಾಶ್ವತ ಶಾಂತಿ ನೆಲೆಸುವಂತೆ ಮಾಡಲು ಕೇಂದ್ರ ಸರಕಾರ ಮೈತೇಯಿ ಮತ್ತು ಕುಕಿ ಸಮುದಾಯಗಳೊಂದಿಗೆ ಮಾತುಕತೆ ನಡೆಸುತ್ತಿದೆ. ಕಳೆದ ವಾರ 3 ದಿನ ಹಿಂಸಾಚಾರವಾಗಿದೆ. ಅದರ ಹೊರತು ಮಣಿಪುರದಲ್ಲಿ ಪರಿಸ್ಥಿತಿ ಶಾಂತವಾಗಿದೆ. ಕೇಂದ್ರ ಸರಕಾರ ಪ್ರಕ್ಷುಬ್ಧ ಈಶಾನ್ಯ ರಾಜ್ಯದಲ್ಲಿ ಶಾಂತಿ ಪುನಃಸ್ಥಾಪಿಸುವ ಕೆಲಸ ಮಾಡುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು. ನೆರೆಯ ದೇಶಗಳಿಂದ ಅಕ್ರಮವಾಗಿ ಒಳನುಸುಳುವಿಕೆಯನ್ನು ತಡೆಯಲು ಮ್ಯಾನ್ಮಾರ್ ದೇಶದ ಗಡಿಯಲ್ಲಿ ತಂತಿ ಬೇಲಿ ಹಾಕಬೇಕಿದೆ. ಸದ್ಯ ಅಂತಾರಾಷ್ಟ್ರೀಯ ಗಡಿಯಲ್ಲಿ 30 ಕಿಮೀ ಬೇಲಿ ಇದೆ. ಒಟ್ಟು 1,500 ಕಿಮೀ ತಂತಿಬೇಲಿ ನಿರ್ಮಾಣಕ್ಕೆ ಹಣ ಮಂಜೂರಾಗಿದ್ದು, ಶೀಘ್ರವೇ ಕೆಲಸ ಪ್ರಾರಂಭವಾಗಲಿದೆ. ಗಡಿ ಸಮೀಪ ವಾಸಿಸುವ ಜನ ದಾಖಲೆಗಳಿಲ್ಲದೆ ಬಂದುಹೋಗುವ ಕ್ರಮವನ್ನು ಈಗಾಗಲೇ ರದ್ದುಗೊಳಿಸಲಾಗಿದೆ ಎಂದರು.

ಸುಷ್ಮಾ, ಶೀಲಾ ಬಳಿಕ 3ನೇ ಮಹಿಳಾ ಸಿಎಂ

## ಶಿಕ್ಷಕಿ ಈಗ ದೆಹಲಿ ಸಿಎಂ

**ದೆಹಲಿ:** ಬಿಜೆಪಿ ನಾಯಕಿ ಸುಷ್ಮಾ ಸ್ವರಾಜ್, ಕಾಂಗ್ರೆಸ್ ನಾಯಕಿ ಶೀಲಾ ದೀಕ್ಷಿತ್ ನಂತರ ದೆಹಲಿ ಸಿಎಂ ಗದ್ದುಗೆ ಏರಿದ 3ನೇ ಮಹಿಳೆ ಎಂಬ ಹೆಗ್ಗಳಿಕೆಗೆ 43 ವರ್ಷದ ಅತಿಶಿ ಪಾತ್ರರಾಗಲಿದ್ದಾರೆ. ಅಲ್ಲದೇ, ಸದ್ಯ ದೇಶದಲ್ಲಿರುವ ಏಕೈಕ ಮಹಿಳಾ ಸಿಎಂ ಮಮತಾ ಬ್ಯಾನರ್ಜಿ ಜತೆಗೆ ಈಗ ಅತಿಶಿ ಸೇರ್ಪಡೆಯಾಗಲಿದ್ದಾರೆ.



ಸುಷ್ಮಾ ಸ್ವರಾಜ್ 1988ರಲ್ಲಿ 52 ದಿನಗಳ ಕಾಲ ದೆಹಲಿ ಸಿಎಂ ಆಗಿದ್ದರು. ಶೀಲಾ ದೀಕ್ಷಿತ್ 15 ವರ್ಷ ದೆಹಲಿ ಸಿಎಂ ಆಗಿ ಕಾರ್ಯನಿರ್ವಹಿಸಿದ್ದರು. ಆ ಮೂಲಕ ದೆಹಲಿಯ ದೀರ್ಘಾವಧಿ ಸಿಎಂ ಎನಿಸಿಕೊಂಡಿದ್ದರು. ಅಬಕಾರಿ ಹಗರಣದಲ್ಲಿ ಡಿಸಿಎಂ ಮನೀಷ್ ಸಿಸೋಡಿಯ ಬಂಧನವಾದ ನಂತರ ಕಲ್ಕಾಜಿ ಕ್ಷೇತ್ರದ ಶಾಸಕಿ ಅತಿಶಿಗೆ ಸಚಿವೆ ಹುದ್ದೆ ಅರಸಿ ಬಂದಿತು. ಕೇಜ್ರಿವಾಲ್, ಸಿಸೋಡಿಯ ನ್ಯಾಯಾಂಗ ಬಂಧನದಲ್ಲಿದ್ದಾಗ ಪಕ್ಷದ ಕಾರ್ಯಕ್ರಮ, ಮಾಧ್ಯಮಗಳಲ್ಲಿ ಪಕ್ಷ ಹಾಗೂ ನಾಯಕರನ್ನು ಸಮರ್ಥಿಸಿಕೊಳ್ಳುವ ಜವಾಬ್ದಾರಿಯನ್ನೂ ಅತಿಶಿ ನಿರ್ವಹಿಸಿದ್ದರು. ಆ.15ರಂದು ಸ್ವಾತಂತ್ರ್ಯ ದಿನಾಚರಣೆಯಂದು ದೆಹಲಿ ಸರಕಾರದ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸುವ ಅವಕಾಶವೂ ಅತಿಶಿ ಅವರಿಗೆ ಸಿಕ್ಕಿತ್ತು. ಇನ್ನೈದು ತಿಂಗಳಿಗೆ ಚುನಾವಣೆ ಎದುರಿಸಲಿರುವ ದೆಹಲಿಯ ಆಡಳಿತ ಚುಕ್ಕಾಣಿ ಹಿಡಿದು ಕಸರತ್ತು ಮಾಡಬೇಕಾದ ಜವಾಬ್ದಾರಿ ಅತಿಶಿ ಮರ್ಲೆನಾ ಅವರ ಹೆಗಲೇರಿದೆ.

#### ಶಿಕ್ಷಕಿಯಿಂದ ಸಿಎಂವರೆಗೆ

ರಾಜಕೀಯ ಪ್ರವೇಶಕ್ಕೆ ಮೊದಲು ಆತಿಶಿ ಆಂಧ್ರದ ರಿಷಿ ವ್ಯಾಲಿ ಶಾಲೆಯಲ್ಲಿ ಇತಿಹಾಸ ಮತ್ತು ಇಂಗ್ಲಿಷ್ ಬೋಧಿಸುತ್ತಿದ್ದರು. ಸದ್ಯ ಅವರಿಗೆ ಇಷ್ಟದ ಶಿಕ್ಷಣ ಖಾತೆ ಸೇರಿದಂತೆ ದೆಹಲಿ ಸರಕಾರದ ಹಣಕಾಸು, ಯೋಜನೆ, ಪಿಡಬ್ಲ್ಯುಡಿ, ಜಲಸಂಪನ್ಮೂಲ, ವಿದ್ಯುತ್, ಸೇವೆಗಳು, ಸಾರ್ವಜನಿಕ ಸಂಪರ್ಕ ಮತ್ತು ವಿಜಿಲೆನ್ಸ್ ಸೇರಿದಂತೆ 11 ಇಲಾಖೆಗಳ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಅಲ್ಲದೇ, ದೆಹಲಿ ಸಂಪುಟ ದಲ್ಲಿನ ಏಕೈಕ ಸಚಿವೆಯಾಗಿದ್ದಾರೆ. ದೆಹಲಿಯ ಸೇಂಟ್ ಸ್ಟೀಫನ್ಸ್ ಕಾಲೇಜಿ ನಲ್ಲಿ ಇತಿಹಾಸ ಅಧ್ಯಯನ ಮಾಡಿದ್ದಾರೆ. ಚೆವೆನಿಂಗ್ ವಿದ್ಯಾರ್ಥಿವೇತನದಲ್ಲಿ ಆಕ್ಸ್‌ಫರ್ಡ್ ವಿವಿಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. 2006ರಲ್ಲಿ 'ರೋಡ್ಸ್' ವಿದ್ವಾಂಸರಾಗಿ ಆಕ್ಸ್‌ಫರ್ಡ್‌ನಲ್ಲಿ ಶೈಕ್ಷಣಿಕ ಸಂಶೋಧನೆ ನಡೆಸಿ ಮತ್ತೊಂದು ಸ್ನಾತಕೋತ್ತರ ಪದವಿ ಗಳಿಸಿದ್ದಾರೆ.

## ನುಸುಳುಕೋರನಿಗೆ ಬಿಎಸ್‌ಎಫ್ ಗುಂಡು

**ಅಮೃತಸರ:** ಅಂತಾರಾಷ್ಟ್ರೀಯ ಗಡಿ ಬಳಿ ಭಾರತ ದೊಳಗೆ ನುಸುಳುತ್ತಿದ್ದ ಪಾಕಿಸ್ತಾನದ ವ್ಯಕ್ತಿಯನ್ನು ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಸೋಮವಾರ ರಾತ್ರಿ 9 ಗಂಟೆಯಲ್ಲಿ ಹೊಡೆದುರುಳಿಸಿದೆ. ಪಂಜಾಬ್‌ನ ಅಮೃತಸರದ ಗಡಿ ಗ್ರಾಮ ರತನ್‌ಖುರ್ದ್ ಬಳಿ ಗಡಿ ದಾಟಿ ಬರುತ್ತಿದ್ದ ವ್ಯಕ್ತಿಯನ್ನು ಗಮನಿಸಿದ ಬಿಎಸ್‌ಎಫ್ ಯೋಧರು, ವಾಪಸ್ ಹೋಗಲು ಸೂಚಿಸಿದರೂ ಆತ ಭದ್ರತಾ ಪಡೆಗಳಿಗೆ ಆಕ್ರಮಣಕಾರಿ ಸನ್ನೆ ಮಾಡಿದ್ದಾನೆ. ಬಳಿಕ ನುಸುಳುವ ಯತ್ನ ಮುಂದುವರಿಸಿದ್ದಾನೆ. ನುಸುಳುಕೋರನ ಜೇಬಿನಲ್ಲಿ 270 ಪಾಕಿಸ್ತಾನಿ ರುಪಿ ಪತ್ತೆಯಾಗಿದೆ.

## ವೈದ್ಯರ ಬೇಡಿಕೆ ಭಾಗಶಃ ಈಡೇರಿಕೆ: ಮಮತಾ

**ಕೋಲ್ಕತ್ತ:** ಪಶ್ಚಿಮ ಬಂಗಾಳ ಸರಕಾರ ಮತ್ತು ಪ್ರತಿಭಟನಾ ನಿರತ ಕಿರಿಯ ವೈದ್ಯರ ನಡುವಿನ 5ನೇ ಸಭೆ ಭಾಗಶಃ ಯಶ ಕಂಡಿದೆ. ಕೋಲ್ಕತ್ತ ನಗರ ಪೊಲೀಸ್ ಆಯುಕ್ತ ವಿನೀತ್ ಗೋಯೆಲ್, ಉತ್ತರ ವಿಭಾಗದ ಉಪ ಆಯುಕ್ತ ಅಭಿಷೇಕ್ ಗುಪ್ತಾ ಹಾಗೂ ಆರೋಗ್ಯ ಇಲಾಖೆ ನಿರ್ದೇಶಕರನ್ನು ಮಮತಾ ಸರಕಾರ ವರ್ಗಾವಣೆ ಮಾಡಿದೆ.



ಮನೋಜ್ ಕುಮಾರ್ ವರ್ಮಾ ಹೊಸ ಆಯುಕ್ತರಾಗಿ ಮಂಗಳವಾರ ಸಂಜೆ 4 ಗಂಟೆಗೆ ನೇಮಕಗೊಂಡಿದ್ದಾರೆ. ಆದರೆ, ಸರಕಾರದ ಪ್ರಧಾನ ಕಾರ್ಯದರ್ಶಿ ವಿರುದ್ಧ ಕ್ರಮದ ವಿಚಾರವಾಗಿ ಸರಕಾರ ಯಾವುದೇ ಭರವಸೆ ನೀಡಿಲ್ಲ. ಕಾಳಿಘಾಟ್‌ನಲ್ಲಿರುವ ಸಿಎಂ ನಿವಾಸಕ್ಕೆ ಸಂಜೆ 6.20ಕ್ಕೆ ಆಗಮಿಸಿದ ಕಿರಿಯ ವೈದ್ಯರ ನಿಯೋಗ ರಾತ್ರಿ 9ರವರೆಗೆ ಸಭೆ ನಡೆಸಿದೆ. ಸಭೆಯಲ್ಲಿ ಚರ್ಚೆಯಾದ ವಿಷಯಗಳ ದಾಖಲೆಗೆ 42 ವೈದ್ಯರು ಹಾಗೂ ಸರಕಾರದ ಮುಖ್ಯ ಕಾರ್ಯದರ್ಶಿ ಮನೋಜ್ ಪಂತ್ ಸಹಿ ಮಾಡಿದ್ದಾರೆ. ಕಿರಿಯ ವೈದ್ಯರ ಶೇ.99ರಷ್ಟು ಬೇಡಿಕೆ ಈಡೇರಿವೆ ಎಂದು ಸಿಎಂ ಮಮತಾ ಹೇಳಿದ್ದಾರೆ. ಸಭೆ ಬಳಿಕ ಪ್ರತಿಭಟನೆ ನಿಲ್ಲಿಸುವಂತೆ ಮಮತಾ ಕಿರಿಯ ವೈದ್ಯರಲ್ಲಿ ಮನವಿ ಮಾಡಿದ್ದಾರೆ.

ಸಿಎಂ ನಿವಾಸದಿಂದ ಹೊರ ಬಂದ ಕಿರಿಯ ವೈದ್ಯರ ನಿಯೋಗ 5 ಬೇಡಿಕೆಗಳ ವಿಚಾರದಲ್ಲಿ ಕೆಲವು ಒಪ್ಪಂದ ಕೆಲವು ಭಿನ್ನಾಭಿಪ್ರಾಯಗಳಿವೆ. ನಮ್ಮ ಬೇಡಿಕೆಗಳನ್ನು ಸರಕಾರಕ್ಕೆ ತಿಳಿಸಿದ್ದೇವೆ. ಪ್ರತಿಭಟನೆ ಕೈ ಬಿಡುವ ವಿಚಾರ ಚರ್ಚಿಸಿ ನಿರ್ಧರಿಸುತ್ತೇವೆ ಎಂದು ಹೇಳಿದೆ. ಸಿಎಂ ನುಡಿದಂತೆ ನಡೆದರಷ್ಟೇ ಪ್ರತಿಭಟನೆ ಕೈಬಿಡಲಾಗುವುದು ಎಂದಿದ್ದಾರೆ.

## ಕೇಜ್ರಿವಾಲ್ ರಾಜೀನಾಮೆ

**ದೆಹಲಿ:** ಆಮ್ ಆದ್ಮಿ ಪಕ್ಷದ(ಎಎಪಿ) ನಾಯಕ ಅರವಿಂದ ಕೇಜ್ರಿವಾಲ್ ಮಂಗಳವಾರ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರನ್ನು ಭೇಟಿಯಾಗಿ ಸಿಎಂ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಇದೇ ವೇಳೆ ನಿಯೋಜಿತ ಸಿಎಂ ಆತಿಷಿ ಮರ್ಲೆನಾ ಹೊಸದಾಗಿ ಸರಕಾರ ರಚನೆಗೆ ಹಕ್ಕು ಮಂಡಿಸಿದರು.

ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಸೆ.17ರಂದು ಘೋಷಿಸಿದ್ದ ಕೇಜ್ರಿವಾಲ್ ಮಂಗಳವಾರ ಬೆಳಗ್ಗೆ ಶಾಸಕಾಂಗ ಪಕ್ಷದ ಸಭೆ ಕರೆದು ನೂತನ ಸಿಎಂ ಆಯ್ಕೆ ಚರ್ಚಿಸಿದರು. ನಿರೀಕ್ಷೆಯಂತೆಯೇ ಸಚಿವೆ ಆತಿಷಿ ಆಯ್ಕೆಯಾದರು. ಸಂಜೆ 4.30ಕ್ಕೆ ಲೆಫ್ಟಿನೆಂಟ್ ಗವರ್ನರ್ ಅವರನ್ನು ಕೇಜ್ರಿವಾಲ್ ಮತ್ತು ಆತಿಷಿ ಭೇಟಿಯಾದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಆತಿಷಿ 'ಕೇಜ್ರಿವಾಲ್ ರಾಜೀನಾಮೆ ಆಪ್ ಪಕ್ಷ-ದೆಹಲಿ ಜನತೆಗೆ ಭಾವುಕ ಕ್ಷಣ. ದೆಹಲಿ ಜನ ಕೇಜ್ರಿವಾಲ್‌ರನ್ನು ಮತ್ತೆ ಸಿಎಂ ಮಾಡುವರು. ಮುಂದಿನ ಚುನಾವಣೆವರೆಗಷ್ಟೇ ದೆಹಲಿ ನನ್ನ ಜವಾಬ್ದಾರಿ'ಎಂದರು. 'ದೆಹಲಿಗೆ ಒಬ್ಬರೇ ಸಿಎಂ, ಅವರು ಅರವಿಂದ ಕೇಜ್ರಿವಾಲ್' ಎಂದು ಹೇಳಿದರು. ಮುಂಬರುವ ಚುನಾವಣೆಯಲ್ಲಿ ಕೇಜ್ರಿವಾಲ್ ಅವರನ್ನು ಮತ್ತೆ ಸಿಎಂ ಸ್ಥಾನಕ್ಕೆ ತರುವಂತೆ ಮನವಿ ಮಾಡಿದರು.

ನಿರ್ಬಂಧಿಸದಿರಿ, ಮಹಿಳೆಯರಿಗೆ ಸುರಕ್ಷತೆ ಕೊಡಿ

## ನೈಟ್ ಶಿಫ್ಟ್: ದೀದಿಗೆ ಸುಪ್ರೀಂ ಚಾಟಿ

**ದೆಹಲಿ:** ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ವೈದ್ಯೆ ಮೇಲಿನ ಹತ್ಯಾಚಾರ ಪ್ರಕರಣದಲ್ಲಿ ಸುಮೊಟೊ ಕೇಸ್ ದಾಖಲಿಸಿ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್, ಮಹಿಳಾ ವೈದ್ಯರಿಗೆ ರಾತ್ರಿ ಪಾಳಿ ಕೆಲಸ ನಿರ್ಬಂಧಿಸಿದ ಪಶ್ಚಿಮ ಬಂಗಾಳ ಸರಕಾರಕ್ಕೆ ಚಾಟಿ ಬೀಸಿದೆ. ಮಹಿಳೆಯರಿಗೆ ಸುರಕ್ಷತೆ ನೀಡಬೇಕೆ ಹೊರತು ನಿರ್ಬಂಧಿಸುವುದಲ್ಲ ಎಂದು ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ, ಮಂಗಳವಾರ ವಿಚಾರಣೆ ವೇಳೆ ಪಶ್ಚಿಮ ಬಂಗಾಳದ ಸರಕಾರಿ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯಕೀಯ ಸಿಬ್ಬಂದಿಗೆ ರಾತ್ರಿ ಪಾಳಿ ನಿರ್ಬಂಧಿಸಿ ಹೊರಡಿಸಿದ ಅಧಿಸೂಚನೆಗೆ ಅಸಮಾಧಾನ ವ್ಯಕ್ತಪಡಿಸಿದೆ. ಸರಕಾರವೇಕೆ ಮಹಿಳಾ ವೈದ್ಯರನ್ನು ರಾತ್ರಿ ಪಾಳಿಯಿಂದ ನಿರ್ಬಂಧಿಸುತ್ತಿದೆ ಎಂದು ಸರಕಾರದ ಪರ ವಕೀಲ ಕಪಿಲ್ ಸಿಬಲ್ ಅವರನ್ನು ಪೀಠ ಪ್ರಶ್ನಿಸಿದೆ. ಮಹಿಳೆಯರೂ ಎಲ್ಲಾ ಶಿಫ್ಟ್‌ನಲ್ಲಿಯೂ ಕೆಲಸ ಮಾಡಲು ಸಿದ್ಧರಿರುವಾಗ ಏಕೆ ನಿರ್ಬಂಧಿಸಬೇಕು? ಅವರಿಗೆ ಬೇಕಿರುವುದು ಸುರಕ್ಷತೆ ಎಂದು ಹೇಳಿದೆ. ಜತೆಗೆ ರಾತ್ರಿ ಪಾಳಿ ಅಧಿಸೂಚನೆ ಬದಲಿಸುವಂತೆ ರಾಜ್ಯ ಸರಕಾರಕ್ಕೆ ಆದೇಶಿಸಿದೆ.

### ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
ಎ ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್

CIN No. L65923KA2006PLC040028
ನೋಂದಾಯಿತ ಕಛೇರಿ: ದಿ ಫೇರ್‌ವೇ ಬ್ಯುಸಿನೆಸ್ ಪಾರ್ಕ್ #10/1, 11/2, 12/2B, ಡೊಮ್ಮಲೂರ್ ಆಫ್, ಕೋರಮಂಗಲ ಒಳವರ್ತುಲ ರಸ್ತೆ, EGL ಪಕ್ಕ, ಚಲ್ಲಘಟ್ಟ, ಬೆಂಗಳೂರು - 560071.
ದೂರವಾಣಿ: +91 - 8046020100; ಇಮೇಲ್: info@janabank.com; ವೆಬ್‌ಸೈಟ್: www.janabank.com

**ಅಂಚೆ ಮತದಾನದ ನೋಟೀಸ್**

ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 108 ಮತ್ತು 110 ರ ನಿಬಂಧನೆಗಳು ಮತ್ತು ಇತರ ಅನ್ವಯವಾಗುವ ಇತರ ನಿಬಂಧನೆಗಳಿಗೆ ಅನುಸಾರವಾಗಿ, ತಿದ್ದುಪಡಿ ಮಾಡಿದಂತೆ, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರೊಂದಿಗೆ ಒಟ್ಟಿಗೆ ಅನ್ವಯವಾಗುವಂತೆ, ತಿದ್ದುಪಡಿ ಮಾಡಿದಂತೆ ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("MCA"), ಭಾರತ ಸರ್ಕಾರದಿಂದ ಈ ನಿಟ್ಟಿನಲ್ಲಿ ಹೊರಡಿಸಲಾದ ಇತರ ಸಾಮಾನ್ಯ ಸುತ್ತೋಲೆಗಳು, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಕಾರ್ಯದರ್ಶಿ ಮಾನದಂಡಗಳು, ಸೆಕ್ಯುರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾದ 44 ನೇ ನಿಯಮಾವಳಿ (ಪಟ್ಟಿ ಮಾಡುವ ಜವಾಬ್ದಾರಿಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು, 2015, ತಿದ್ದುಪಡಿ ಮಾಡಿದಂತೆ ("ಪಟ್ಟಿ ಮಾಡುವ ನಿಯಮಾವಳಿಗಳು") ಯಾವುದೇ ಇತರ ಅನ್ವಯವಾಗುವ ಕಾನೂನು, ನಿಯಮ ಮತ್ತು ನಿಬಂಧನೆಗಳಿಗೆ (ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಮರು-ಅನುಷ್ಠಾನ(ಗಳು) ಸೇರಿದಂತೆ, ಸದ್ಯಕ್ಕೆ ಜಾರಿಯಲ್ಲಿರುವ), ಅನುಸಾರವಾಗಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ("ಕಂಪನಿ/ಬ್ಯಾಂಕ್") ಸದಸ್ಯರ ಅನುಮೋದನೆಯನ್ನು ರಿಮೋಟ್ ಇ-ವೋಟಿಂಗ್ (ಇ-ವೋಟಿಂಗ್") ಪ್ರಕ್ರಿಯೆಯ ಮೂಲಕ ಈ ಕೆಳಗಿನ ವಿಶೇಷ ರೆಸಲ್ಯೂಶನ್ನಾಗಿ ಕೋರಲಾಗಿದೆ:

| ಕ್ರಮ ಸಂ | ವಿಶೇಷ ರೆಸಲ್ಯೂಶನ್ ವಿವರಣೆ |
|---|---|
| 1. | ಶ್ರೀ ದಿನೇಶ್ ಸಿ ಪಟ್ವಾರಿ (DIN: 10060352) ಅವರನ್ನು ಬ್ಯಾಂಕಿನ ಕಾರ್ಯನಿರ್ವಾಹಕೇತರ ಸ್ವತಂತ್ರ ನಿರ್ದೇಶಕರಾಗಿ ನೇಮಕ |

MCA ಸುತ್ತೋಲೆಗಳ ಅನುಸಾರವಾಗಿ, ಬ್ಯಾಂಕ್ 13ನೇ ಸೆಪ್ಟೆಂಬರ್ 2024 ("ಕಟ್-ಆಫ್ ದಿನಾಂಕ") ಶುಕ್ರವಾರದಂದು ಬ್ಯಾಂಕ್/ ಠೇವಣಿ ಭಾಗವಹಿಸುವವರ (ರುಗಳ) ಇಮೇಲ್ ವಿಳಾಸಗಳನ್ನು ಬ್ಯಾಂಕ್‌ನಲ್ಲಿ ನೋಂದಾಯಿಸಿದ ಸದಸ್ಯರಿಗೆ ಎಲೆಕ್ಟ್ರಾನಿಕ್ ಮೋಡ್ ಮೂಲಕ 17 ಸೆಪ್ಟೆಂಬರ್ 2024 ಮಂಗಳವಾರದಂದು ವಿವರಣಾತ್ಮಕ ಹೇಳಿಕೆಯೊಂದಿಗೆ ಅಂಚೆ ಮತಪತ್ರ ನೋಟೀಸ್‌ನ ಎಲೆಕ್ಟ್ರಾನಿಕ್ ಪ್ರತಿಗಳ ರವಾನೆಯನ್ನು ಬ್ಯಾಂಕ್ ಪೂರ್ಣಗೊಳಿಸಿದೆ.

ಅಂಚೆ ಮತಪತ್ರದ ನೋಟೀಸ್ ಬ್ಯಾಂಕ್‌ನ ವೆಬ್‌ಸೈಟ್ www.janabank.com, ಮತ್ತು BSE ಲಿಮಿಟೆಡ್‌ನ ವೆಬ್‌ಸೈಟ್‌ನ ಸಂಬಂಧಿತ ವಿಭಾಗ: www.bseindia.com ಭಾರತದ ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ: www.nseindia.com ಮತ್ತು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್‌ನ ವೆಬ್‌ಸೈಟ್: www.evoting.nsdl.com.ನಲ್ಲಿ ಸಹ ಲಭ್ಯವಿದೆ

MCA ಸುತ್ತೋಲೆಗಳ ಪ್ರಕಾರ, ಸದಸ್ಯರು ಇ-ವೋಟಿಂಗ್ ಪ್ರಕ್ರಿಯೆಯ ಮೂಲಕ ಮಾತ್ರ ಮತ ಚಲಾಯಿಸಬಹುದು. ಕಟ್-ಆಫ್ ದಿನಾಂಕದಂದು ಅವರು ಹೊಂದಿರುವ ಬ್ಯಾಂಕ್‌ನ ಈಕ್ವಿಟಿ ಷೇರುಗಳ ಆಧಾರದ ಮೇಲೆ ಸದಸ್ಯರ ಮತದಾನದ ಹಕ್ಕುಗಳನ್ನು ಲೆಕ್ಕಹಾಕಲಾಗುತ್ತದೆ. ಕಟ್-ಆಫ್ ದಿನಾಂಕದಂದು ಬ್ಯಾಂಕಿನ ಷೇರುದಾರರಲ್ಲದ ಯಾವುದೇ ವ್ಯಕ್ತಿ, ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಅಂಚೆ ಮತಪತ್ರವನ್ನು ಬಳಸತಕ್ಕದ್ದು.

ಕಂಪನಿಯು ಇ-ವೋಟಿಂಗ್ ಸೌಲಭ್ಯವನ್ನು ಒದಗಿಸುವ ಏಜೆನ್ಸಿಯಾಗಿ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್‌ನ ("ಎನ್‌ಎಸ್‌ಡಿಎಲ್") ಸೇವೆಗಳನ್ನು ನಿಯೋಜಿಸಿಕೊಂಡಿದೆ. ರಿಮೋಟ್ ಇ-ವೋಟಿಂಗ್ ಅವಧಿಯು ಬುಧವಾರ, ಸೆಪ್ಟೆಂಬರ್ 18, 2024 ರಂದು 09:00 AM (IST) ಕ್ಕೆ ಪ್ರಾರಂಭವಾಗುತ್ತದೆ. 17 ಅಕ್ಟೋಬರ್ 2024 (ಅಂದರೆ ವಿದ್ಯುನ್ಮಾನ ಮತಗಳನ್ನು ಚಲಾಯಿಸಲು ಕೊನೆಯ ದಿನಾಂಕ) ಗುರುವಾರ 05:00 PM (IST) ಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಲು ಸದಸ್ಯರನ್ನು ವಿನಂತಿಸಲಾಗಿದೆ. ಇದರ ನಂತರ ರಿಮೋಟ್ ಇ-ವೋಟಿಂಗ್ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ಮತದಾನದ ಕೊನೆಯ ದಿನ ಅಂದರೆ ಗುರುವಾರ, 17ನೇ ಅಕ್ಟೋಬರ್ 2024 ರಂದು, ಅಗತ್ಯವಿರುವ ಬಹುಮತದಿಂದ ಅಂಗೀಕರಿಸಲ್ಪಟ್ಟರೆ, ರೆಸೊಲ್ಯೂಷನ್ ಅನ್ನು ಅಂಗೀಕರಿಸಲಾಗಿದೆ ಎಂದು ಪರಿಗಣಿಸುವ ದಿನಾಂಕವಾಗಿರುತ್ತದೆ..

ಇ-ವೋಟಿಂಗ್ ಸೌಲಭ್ಯವನ್ನು ಪ್ರವೇಶಿಸಲು ಷೇರುದಾರರು ತಮ್ಮ ಡಿಮ್ಯಾಟ್ ಖಾತೆಯಲ್ಲಿ ತಮ್ಮ ಮೊಬೈಲ್ ನಂಬರ್ ಮತ್ತು ಇಮೇಲ್ ಐಡಿಯನ್ನು ಸರಿಯಾಗಿ ನವೀಕರಿಸಲು ವಿನಂತಿಸಲಾಗಿದೆ.

ನಿರ್ದೇಶಕರ ಮಂಡಳಿಯು 13 ನೇ ಸೆಪ್ಟೆಂಬರ್ 2024 ರಂದು ಹೊರಡಿಸಲಾದ ಅಧಿಸೂಚನೆಯ ಪ್ರಕಾರ ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯ ಮೂಲಕ ಅಂಚೆ ಮತಪತ್ರವನ್ನು ನಡೆಸಲು ಸ್ಕ್ರೂಟಿನೈಸರ್ ಆಗಿ ಶ್ರೀ ನಾಗೇಂದ್ರ ಡಿ ರಾವ್, ಪ್ರಾಕ್ಟೀಸ್ ಕಂಪನಿ ಕಾರ್ಯದರ್ಶಿ (ಎಫ್‌ಸಿಎಸ್ ಸಂ. 5553; ಸಿಪಿ ಸಂ. 7731) ಅವರನ್ನು ನೇಮಿಸಿದೆ.

ಯಾವುದೇ ಪ್ರಶ್ನೆಗಳಿದ್ದಲ್ಲಿ, ನೀವು www.evoting.nsdl.com ನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಷೇರುದಾರರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQ ಗಳು) ಮತ್ತು ಇ-ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಉಲ್ಲೇಖಿಸಬಹುದು ಅಥವಾ 022 – 4886 7000 ಗೆ ಕರೆ ಮಾಡಬಹುದು ಅಥವಾ evoting@nsdl.com. ನಲ್ಲಿ ಶ್ರೀ ಫಲ್ಗುಣಿಗೆ ವಿನಂತಿಯನ್ನು ಕಳುಹಿಸಬಹುದು.

ಸ್ಕ್ರೂಟಿನೈಸರ್ ತನಿಖೆಯನ್ನು ಪೂರ್ಣಗೊಳಿಸಿದ ನಂತರ, ತನ್ನ ವರದಿಯನ್ನು ಬ್ಯಾಂಕಿನ ಅಧ್ಯಕ್ಷರಿಗೆ ಅಥವಾ ಅವರಿಂದ ಅಧಿಕಾರ ಪಡೆದ ಯಾವುದೇ ವ್ಯಕ್ತಿಗೆ ಸಲ್ಲಿಸತಕ್ಕದ್ದು. ಅಂಚೆ ಮತದಾನದ ಫಲಿತಾಂಶಗಳು ಮತ್ತು ಸ್ಕ್ರೂಟಿನೈಸರ್ ವರದಿಯನ್ನು ಮತದಾನದ ಅವಧಿಯ ಮುಕ್ತಾಯದಿಂದ ಎರಡು ಕೆಲಸದ ದಿನಗಳಲ್ಲಿ ಪ್ರಕಟಿಸಲಾಗುವುದು ಮತ್ತು ಕಂಪನಿಯ ವೆಬ್‌ಸೈಟ್ www.janabank.com ಮತ್ತು NSDL ವೆಬ್‌ಸೈಟ್ : www.evoting.nsdl.com ನಲ್ಲಿ ಪ್ರದರ್ಶಿಸಲಾಗುತ್ತದೆ ಮತ್ತು BSE ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿ ಪ್ರಕಟಿಸಲಾಗುವುದು, ಬ್ಯಾಂಕ್‌ನ ಈಕ್ವಿಟಿ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್ಚೇಂಜ್‌ಗಳಲ್ಲಿ ಸಹ ನೀಡಲಾಗುವುದು.

ವಿದ್ಯುನ್ಮಾನ ವಿಧಾನದ ಮೂಲಕ ಮತದಾನ ಸೇರಿದಂತೆ ಅಂಚೆ ಮತಪತ್ರದ ಮೂಲಕ ಮತದಾನಕ್ಕೆ ಸಂಬಂಧಿಸಿದ ಪ್ರಶ್ನೆ/ಕುಂದುಕೊರತೆಗಳು, ಯಾವುದಾದರೂ ಇದ್ದರೆ, ಪರಿಹರಿಸಲು ಜವಾಬ್ದಾರಿಯುತ ವ್ಯಕ್ತಿಯ ಸಂಪರ್ಕ ವಿವರಗಳು:

ಶ್ರೀಮತಿ ಲಕ್ಷ್ಮಿ ಆರ್ ಎನ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಿಯನ್ಸ್ ಆಫೀಸರ್
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್
ದಿ ಫೇರ್‌ವೇ ಬ್ಯುಸಿನೆಸ್ ಪಾರ್ಕ್, ಮೊದಲ ಮಹಡಿ, # 10/1, 11/2 & 12/2B ಕಚೇರಿ ದೊಮ್ಮಲೂರು, ಕೋರಮಂಗಲ ಒಳ ವರ್ತುಲ ರಸ್ತೆ, EGL ಬಿಸಿನೆಸ್ ಪಾರ್ಕ್ ಪಕ್ಕ, ಚಲ್ಲಘಟ್ಟ, ಬೆಂಗಳೂರು - 560071.
ದೂರವಾಣಿ: +91- 8046020100; ಇಮೇಲ್: investor.grievance@janabank.com

ಮಂಡಳಿಯ ಆದೇಶದ ಮೇರೆಗೆ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ಗೆ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: 18ನೇ ಸೆಪ್ಟೆಂಬರ್ 2024

ಲಕ್ಷ್ಮಿ ಆರ್ ಎನ್
ಕಂಪನಿ ಸೆಕ್ರೆಟರಿ & ಕಂಪ್ಲಿಯನ್ಸ್ ಆಫೀಸರ್

## ಅಮೆರಿಕ ಹಿಂದೂ ದೇಗುಲದ ಮೇಲೆ ದುಷ್ಕರ್ಮಿಗಳ ದಾಳಿ



**ನ್ಯೂಯಾರ್ಕ್:** ಅಮೆರಿಕದ ನ್ಯೂಯಾರ್ಕ್‌ನ ಮೆಲ್ವಿಲ್ಲೆಯಲ್ಲಿರುವ ಬಿಎಪಿಎಸ್ ಸ್ವಾಮಿ ನಾರಾಯಣ ದೇಗುಲದ ಮೇಲೆ ದುಷ್ಕರ್ಮಿಗಳು ಸೋಮವಾರ ದಾಳಿ ನಡೆಸಿ ಕಟ್ಟಡದ ಹೊರಭಾಗದಲ್ಲಿನ ಗೋಡೆಗಳನ್ನು ವಿರೂಪಗೊಳಿಸಿದ್ದಾರೆ.

ಘಟನೆಯನ್ನು ಭಾರತ ತೀವ್ರವಾಗಿ ಖಂಡಿಸಿದ್ದು, ದುಷ್ಕರ್ಮಿಗಳ ವಿರುದ್ಧ ತಕ್ಷಣವೇ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಅಮೆರಿಕ ಸರಕಾರಕ್ಕೆ ಆಗ್ರಹಿಸಿದೆ. ದೇಗುಲದ ಹೊರಾವರಣದಲ್ಲಿನ ಫಲಕದ ಗೋಡೆಯ ಮೇಲೆ, 'ಮೋದಿ ಟೆರರಿಸ್ಟ್, ಹಿಂದೂ-ಸ್ಥಾನ್ ಮುರ್ದಾಬಾದ್' ಎಂದು ಬಣ್ಣದಲ್ಲಿ ಬರೆದಿದ್ದರೆ, ಪ್ರವೇಶ ದ್ವಾರದ ಬಳಿ ರಸ್ತೆ ಮೇಲೆ 'ಎಫ್... ಮೋದಿ' ಎಂದೂ ದುಷ್ಕರ್ಮಿಗಳು ಗೀಚಿದ್ದಾರೆ. ನ್ಯೂಯಾರ್ಕ್‌ನಲ್ಲಿನ ಭಾರತದ ಕಾನ್ಸುಲೇಟ್ ಜನರಲ್, 'ಇಂಥ ಕಿಡಿಗೇಡಿ ಕೃತ್ಯವನ್ನು ಸಹಿಸಲಾಗದು. ದುಷ್ಕರ್ಮಿಗಳ ವಿರುದ್ಧ ತ್ವರಿತ ಹಾಗೂ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅಮೆರಿಕದ ಅಧಿಕಾರಿಗಳಿಗೆ ಒತ್ತಾಯಿಸಲಾಗಿದೆ' ಎಂದು 'ಎಕ್ಸ್'ನಲ್ಲಿ ಬರೆದಿದ್ದಾರೆ. ದೇಗುಲದ ಮೇಲಿನ ದಾಳಿ ಸುದ್ದಿ ತಿಳಿಯುತ್ತಲೇ ಆ ಭಾಗದ ಅನಿವಾಸಿ ಭಾರತೀಯರು, ಸ್ಥಳೀಯ ಅಧಿಕಾರಿಗಳು, ರಾಜ್ಯ ಸರಕಾರದ ಪ್ರತಿನಿಧಿಗಳು ದೇಗುಲದ ಬಳಿ ಮಂಗಳವಾರ ನಸುಕಿನಲ್ಲೇ ಆಗಮಿಸಿ ಶಾಂತಿಸಭೆ ನಡೆಸಿದರು. ಹಿಂದೂಗಳ ಜತೆಗಿರುವುದಾಗಿ ಒಗ್ಗಟ್ಟು ಪ್ರದರ್ಶಿಸಿದರು ಎಂದು ಬಿಎಪಿಎಸ್ ಸಾರ್ವಜನಿಕ ಸಂಪರ್ಕ ವಿಭಾಗ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದೆ.

#### ಎಸ್‌ಎಫ್‌ಜೆ ಮೇಲೆ ಶಂಕೆ

ಇದು ಖಲಿಸ್ತಾನ್ ಪರವಾಗಿರುವ ಉಗ್ರ, ಅಮೆರಿಕ ವಾಸಿ ಗುರುಪತ್ವಂತ್ ಪನ್ನೂನ್‌ನ ಕಡೆಯವರ ಹಾಗೂ 'ಸಿಖ್ ಫಾರ್ ಜಸ್ಟೀಸ್'(ಎಸ್‌ಎಫ್‌ಜೆ) ಸಂಘಟನೆಯ ದುಷ್ಕೃತ್ಯವಾಗಿದೆ ಎಂದು ಹಿಂದೂ ಅಮೆರಿಕನ್ ಫೌಂಡೇಷನ್ 'ಎಕ್ಸ್' ಖಾತೆಯಲ್ಲಿ ಆರೋಪಿಸಿದೆ.

4000 ಕೆಜಿ ಸಸ್ಯಾಹಾರಿ ಲ್ಯಾಂಗರ್ | ರಿಯಾಯಿತಿ ಮಾರಾಟ | ಲಡ್ಡು ಹಂಚಿಕೆ

# ದೇಶದೆಲ್ಲೆಡೆ ಮೋದಿ ಜನ್ಮದಿನ ಆಚರಣೆ

**ದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರ 74ನೇ ಜನ್ಮದಿನವನ್ನು ದೇಶದ ವಿವಿಧೆಡೆ ಸಾರ್ವಜನಿಕರು, ಬಿಜೆಪಿ ಸೇರಿದಂತೆ ವಿವಿಧ ಪಕ್ಷಗಳ ನಾಯಕರು, ಧಾರ್ಮಿಕ ಸಂಸ್ಥೆಗಳು, ಕಲಾವಿದರು, ವಿದ್ಯಾರ್ಥಿಗಳು ವಿವಿಧ ಬಗೆಯಲ್ಲಿ ಆಚರಿಸಿ ಸಂಭ್ರಮಿಸಿದ್ದಾರೆ.

**1000 ಚಿತ್ರ ಪ್ರದರ್ಶನ:** ನರೇಂದ್ರ ಮೋದಿ ಅವರ ಒಂದು ಸಾವಿರ ಛಾಯಾಚಿತ್ರಗಳ ಪ್ರದರ್ಶನಕ್ಕೆ ದೆಹಲಿಯ ಲಲಿತಕಲಾ ಅಕಾಡೆಮಿಯಲ್ಲಿ ಮಂಗಳವಾರ ಚಾಲನೆ ನೀಡಲಾಗಿದ್ದು, ಇದು ಸೆ.30ರವರೆಗೂ ವೀಕ್ಷಣೆಗೆ ಲಭ್ಯವಿದೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ಕೇಂದ್ರದ ಕಾನೂನು ಸಚಿವ ಅರ್ಜುನ್‌ರಾಮ್ ಮೇಘವಾಲ್, ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲ ಕೃಷ್ಣನ್ ಛಾಯಾಚಿತ್ರ ಪ್ರದರ್ಶನ ಉದ್ಘಾಟಿಸಿದರು.

**4000 ಕೆಜಿ ಸಸ್ಯಾಹಾರಿ ಲ್ಯಾಂಗರ್:** ರಾಜಸ್ಥಾನದ ಅಜ್ಮೀರ್ ಷರೀಫ್ ದರ್ಗಾದಲ್ಲಿ 4 ಸಾವಿರ ಕೆಜಿ ತೂಕದ ಸಸ್ಯಾಹಾರಿ ಲ್ಯಾಂಗರ್ ತಯಾರಿಸಿ ಜನರಿಗೆ ಹಂಚಿ ಪ್ರಧಾನಿ ನರೇಂದ್ರ ಮೋದಿ ಜನ್ಮದಿನ ಆಚರಿಸಲಾಗಿದೆ. ಅಕ್ಕಿ, ತುಪ್ಪ, ಒಣ ಹಣ್ಣುಗಳು, ದರ್ಗಾದಲ್ಲಿನ ಸಯ್ಯದ್ ಅಫ್ಸಾನ್ ಛಿಸ್ತಿ, ಗಡ್ಡಿನಾಶಿನ್ ಬಳಸಿ 'ಇಂಡಿಯನ್ ಮೈನಾರಿಟಿ ಫೌಂಡೇಷನ್ ಮತ್ತು ಅಜ್ಮೀರ್ ಷರೀಫ್ ಛಿಸ್ತಿ ಫೌಂಡೇಷನ್' ಸಹಭಾಗಿತ್ವದಲ್ಲಿ ಈ ಲ್ಯಾಂಗರ್ ತಯಾರಿಸಲಾಗಿದೆ.



ಮಾಜಿ ರಾಜ್ಯಪಾಲೆ ಸಂಭ್ರಮ..
ತೆಲಂಗಾಣದ ಮಾಜಿ ರಾಜ್ಯಪಾಲರಾದ ತಮಿಳ್‌ಸಾಯಿ ಸೌಂದರರಾಜನ್ ಚೆನ್ನೈನಲ್ಲಿ ಸಿಹಿ ಹಂಚಿ ಪ್ರೀತಿಯ ನಾಯಕನ ಜನ್ಮದಿನ ಆಚರಿಸಿದರು.



**ಸೂರತ್ ಕಟೌಟ್:** ಗುಜರಾತ್‌ನ ಸೂರತ್‌ನಲ್ಲಿ ಪೋಸ್ಟರ್ ತಯಾರಕ ಪ್ರವೀಣ್ ಗುಪ್ತಾ ಮತ್ತು ತಂಡ ನರೇಂದ್ರ ಮೋದಿ ಅವರ ಚಿತ್ರವಿರುವ 35 ಮೀ. ಎತ್ತರ, 20 ಮೀ. ಅಗಲದ ಕಟೌಟ್ ಪೋಸ್ಟರ್ ತಯಾರಿಸಿ ತಮ್ಮ ಪ್ರೀತಿಯ ಪ್ರಧಾನಿಯ 74ನೇ ಜನ್ಮದಿನ ಆಚರಿಸಿದ್ದಾರೆ. 20 ಜನರು ಸೇರಿಕೊಂಡು 4 ದಿನ ಶ್ರಮಿಸಿ 500 ಮೀಟರ್ ಗುಣಮಟ್ಟದ ಬಟ್ಟೆ ಬಳಸಿ ಬೃಹತ್ ಕಟೌಟ್ ರಚಿಸಿದ್ದಾಗಿ ಪ್ರವೀಣ್ ಹೇಳಿದ್ದಾರೆ. ಬೃಹತ್ ಕಟ್ಟಡದಲ್ಲಿ ಮೋದಿ ವಿಶೇಷ ಕಟೌಟ್ ಅಳವಡಿಸಲಾಗಿದೆ.


**ವಿಶೇಷ ರಿಯಾಯಿತಿ ಮಾರಾಟ:** ಗುಜರಾತ್ ರಾಜ್ಯದ ವಿವಿಧೆಡೆ ವರ್ತಕರು, ಶಾಪಿಂಗ್ ಮಾಲ್‌ಗಳು ತಮ್ಮದೇ ರಾಜ್ಯದ ಮೋದಿಜಿ ಜನ್ಮದಿನವನ್ನು ಭಿನ್ನ ರೀತಿಯಲ್ಲಿ ಆಚರಿಸಿದ್ದಾರೆ. ಶೇ.10ರಿಂದ ಶೇ.90ರವರೆಗೂ ವಿಶೇಷ ರಿಯಾಯಿತಿ ಘೋಷಿಸಿ ಮಾರಾಟ ವಹಿವಾಟು ನಡೆಸಿದರು. ಆ ಮೂಲಕ ಗ್ರಾಹಕರನ್ನು ಖುಷಿಪಡಿಸಿದರು.

**ವಿಶ್ವಕರ್ಮ ವೇಷ:** ವಿಶ್ವಕರ್ಮ ಪೂಜೆ ದಿನವೇ ನರೇಂದ್ರ ಮೋದಿ ಅವರ ಜನ್ಮದಿನ ಬಂದಿರುವುದರಿಂದ ಬಿಹಾರದ ಪಟನಾದಲ್ಲಿ ಬಿಜೆಪಿ ಕಾರ್ಯಕರ್ತರು ಶ್ರೀ ವಿಶ್ವಕರ್ಮ ಭಗವಾನರ ವೇಷದಲ್ಲಿ ಮೋದಿ ಅವರನ್ನು ಚಿತ್ರಿಸಿದ ಕಟೌಟ್ ರಚಿಸಿ ವೇದ ಶಾಲೆಯಲ್ಲಿ ಹಾಲಿನ ಅಭಿಷೇಕ ಮಾಡಿ ಸಂಭ್ರಮಿಸಿದ್ದಾರೆ.

**ಅಮೂಲ್ ವಿಶೇಷ:** ಗುಜರಾತ್‌ನ ಕ್ಷೀರೋತ್ಪನ್ನ ಸಂಸ್ಥೆ 'ಅಮೂಲ್' ಮೋದಿ ಅವರ 74ನೇ ಜನ್ಮದಿನದಂದು 74 ಬಗೆಯ ವಿಶೇಷ ಟಾಪಿಕಲ್ಸ್ ತಯಾರಿಸಿ ಪ್ರದರ್ಶಿಸಿದೆ.

#### 74 ಕಿಲೊ ಲಡ್ಡು

ಪಟನಾದಲ್ಲಿ ಬಿಜೆಪಿ ಬಿಹಾರ ಕಚೇರಿಯಲ್ಲಿ ಪಕ್ಷದ ರಾಜ್ಯಾಧ್ಯಕ್ಷ ದಿಲೀಪ್ ಕುಮಾರ್ ಜೈಸ್ವಾಲ್, ಡಿಸಿಎಂಗಳಾದ ಸಾಮ್ರಾಟ್ ಚೌಧರಿ ಮತ್ತು ವಿಜಯ್ ಕುಮಾರ್ ಸಿನ್ಹಾ 74 ಕಿಲೋ ತೂಕದ ಒಂದೇ ಲಡ್ಡುವನ್ನು ಕೇಕ್ ರೀತಿ ಕತ್ತರಿಸುವ ಮೂಲಕ ಮೋದಿ ಜನ್ಮದಿನ ಆಚರಿಸಿದರು.




#### ಮರಳು ಶಿಲ್ಪ

ದೆಹಲಿಯಲ್ಲಿ ಮತ್ತೊಂದೆಡೆ ಖ್ಯಾತ ಮರಳು ಶಿಲ್ಪ ಕಲಾವಿದ ಸುದರ್ಶನ್ ಪಟ್ನಾಯಕ್ 'ಪುರಿ ಜಗನ್ನಾಥ ದೇವರಿಗೆ ಮೋದಿ ಕೈಮುಗಿಯುತ್ತಿರುವ' ಚಿತ್ರವನ್ನು ಮರಳಿನಲ್ಲಿ ರಚಿಸಿದ್ದಾರೆ. ಅದರ ಜತೆಗೇ 2500 ಹಣತೆಗಳನ್ನು ಬೆಳಗಿಸಿ ಮೋದಿ ಜನ್ಮದಿನ ಸಂಭ್ರಮ ಆಚರಿಸಲಾಗಿದೆ.

## ಕಾಶ್ಮೀರ ಚುನಾವಣೆಗೆ ಕಾಂಗ್ರೆಸ್ ಪ್ರಣಾಳಿಕೆ

**ಶ್ರೀನಗರ:** ಜಮ್ಮು-ಕಾಶ್ಮೀರ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, 'ಹಾತ್ ಬದ್ಲೇಗಾ ಹಾಲಾತ್' ಘೋಷವಾಕ್ಯದಡಿ ರೈತರು, ಯುವಕರು, ಮಹಿಳೆಯರಿಗೆ ಹಲವು ಭರವಸೆ ನೀಡಿದೆ.



ಪಕ್ಷದ ಕಾಶ್ಮೀರ ಘಟಕ ಕಚೇರಿಯಲ್ಲಿ ಎಐಸಿಸಿ ಮುಖ್ಯ ವಕ್ತಾರ ಪವನ್ ಖೇರಾ ಮತ್ತು ಪಿಸಿಸಿ ಅಧ್ಯಕ್ಷ ತಾರಿಕ್ ಹಮೀದ್ ಕರಾರ್ ಪ್ರಣಾಳಿಕೆ ಬಿಡುಗಡೆ ಮಾಡಿ, ಸೇಬಿಗೆ ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ) 72 ರು. ನಿಗದಿ, ಪ್ರಕೃತಿ ವಿಕೋಪವಾದಾಗ ಹಾನಿಗೀಡಾಗುವ ಬೆಳೆಗಳಿಗೆ ವಿಮೆ ಭರವಸೆ ನೀಡಿದರು. ಅಲ್ಲದೇ, ಭೂರಹಿತರು, ಸಣ್ಣ ಹಿಡುವಳಿದಾರರಿಗೆ ವರ್ಷಕ್ಕೆ 4,000 ರು. ಆರ್ಥಿಕ ಬೆಂಬಲ, ಭೂರಹಿತ ರೈತರಿಗೆ ಸಾಗುವಳಿಗಾಗಿ 99 ವರ್ಷ ಭೂಮಿ ಗುತ್ತಿಗೆ ವ್ಯವಸ್ಥೆ, ಶೇ.100ರಷ್ಟು ನೀರಾವರಿ ಖಚಿತ, ಜಿಲ್ಲಾ ಮಟ್ಟದ ನೀರಾವರಿ ಯೋಜನೆಗೆ 2,500 ಕೋಟಿ ರು. ನಿಧಿ ಸ್ಥಾಪನೆ ಹಾಗೂ ಯುವಕರಿಗಾಗಿ 30 ದಿನದಲ್ಲಿ ಉದ್ಯೋಗ ಕ್ಯಾಲೆಂಡರ್, 1 ಲಕ್ಷ ಸರಕಾರಿ ಹುದ್ದೆಗಳ ಭರ್ತಿ, ಪೊಲೀಸ್, ಅಗ್ನಿಶಾಮಕ ದಳ ಮತ್ತು ಅರಣ್ಯ ಸಂರಕ್ಷಣಾ ಪಡೆಗಳಿಗೆ ವಿಶೇಷ ಗಡಿ ನೇಮಕ ಪುನಾರಂಭ, ಪದವಿ ವ್ಯಾಸಂಗ ಮುಗಿಸಿದ ಯುವಕರಿಗೆ 1 ವರ್ಷ ಮಾಸಿಕ 3,500 ರು. ನಿರುದ್ಯೋಗ ಭತ್ಯೆ ಮೊದಲಾದ ಅಂಶಗಳನ್ನು ಕಾಂಗ್ರೆಸ್ ಪ್ರಣಾಳಿಕೆ ಒಳಗೊಂಡಿದೆ.

## ಪಟಾಕಿ ಘಟಕ ಸ್ಫೋಟ: ಮಕ್ಕಳು ಸೇರಿ 12 ಸಾವು

**ಫಿರೋಜಾಬಾದ್:** ಉತ್ತರ ಪ್ರದೇಶದ ಫಿರೋಜಾಬಾದ್‌ನಲ್ಲಿನ ಪಟಾಕಿ ಘಟಕದಲ್ಲಿ ಸ್ಫೋಟವಾಗಿದ್ದು, ಪಕ್ಕದಲ್ಲಿದ್ದ ಮನೆ ಕುಸಿದಿದೆ. ಪರಿಣಾಮ 3 ವರ್ಷ ಮತ್ತು 1.5 ವರ್ಷದ ಇಬ್ಬರು ಮಕ್ಕಳು ಸೇರಿದಂತೆ 12 ಮಂದಿ ಮೃತಪಟ್ಟಿದ್ದಾರೆ. 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.



ಸ್ಫೋಟದ ತೀವ್ರತೆಗೆ ಪಕ್ಕದ ಮನೆ ಪೂರ್ಣ ಕುಸಿದಿದೆ. ಆ ಮನೆಯಲ್ಲಿದ್ದ ಇಬ್ಬರು ಮಕ್ಕಳು ಮತ್ತು ಮೂವರು ವಯಸ್ಕರು ಸಾವಿಗೀಡಾಗಿದ್ದಾರೆ. ಸಮೀಪದಲ್ಲಿದ್ದ ಮತ್ತೊಂದು ಕಟ್ಟಡದ ಗೋಡೆ ಕುಸಿದು, ಒಂದೇ ಕುಟುಂಬದ 7 ಮಂದಿ ಅವಶೇಷಗಳಡಿ ಸಮಾಧಿ ಯಾಗಿದ್ದಾರೆ. ಪಟಾಕಿ ಘಟಕದಲ್ಲಿ ಸೋಮವಾರ ರಾತ್ರಿ 10.30ರ ವೇಳೆ ಸ್ಫೋಟ ಸಂಭವಿಸಿದೆ. ಸಮೀಪದಲ್ಲಿದ್ದ ಹತ್ತಕ್ಕೂ ಹೆಚ್ಚು ಮನೆಗಳು ಕುಸಿದು ಬಿದ್ದಿವೆ. ಅವಶೇಷಗಳಡಿ ಹಲವರು ಸಿಲುಕಿರುವ ಸಾಧ್ಯತೆ ಇದೆ. ಶೋಧ ನಡೆಸಲಾಗುತ್ತಿದೆ ಎಂದು ಸ್ಥಳೀಯರು ಹೇಳಿದ್ದಾರೆ.

ಚಂದ್ರಪಾಲ್ ಎಂಬವರ ಮನೆ ಬಾಡಿಗೆಗೆ ಪಡೆದಿದ್ದ ಪಟಾಕಿ ವ್ಯಾಪಾರಿ, ಅಲ್ಲಿ ಪಟಾಕಿ ಘಟಕ ನಡೆಸುತ್ತಿದ್ದರು. ಕಟ್ಟಡದಲ್ಲಿ ಭಾರಿ ಪ್ರಮಾಣದಲ್ಲಿ ಗನ್ ಪೌಡರ್ ಶೇಖರಿಸಿಡಲಾಗಿತ್ತು. ಅದರಿಂದಲೇ ಸ್ಫೋಟವಾಗಿದೆ ಎನ್ನಲಾಗಿದೆ.


## 1.87 ಕೋಟಿ ರು.ಗೆ ಗಣೇಶ ಲಡ್ಡು ಹರಾಜು

**ಹೈದರಾಬಾದ್:** ತೆಲಂಗಾಣದಲ್ಲಿ ಈ ಬಾರಿಯ ಗಣೇಶೋತ್ಸವ ಸಂಭ್ರಮ ಹಿಂದೆಂದಿಗಿಂತಲೂ ಅಧಿಕವಾಗಿದೆ. ಗಣೇಶೋತ್ಸವ ಮಂಟಪಗಳಲ್ಲಿನ ಲಡ್ಡು ಪ್ರಸಾದದ ಹರಾಜು ಈ ಸಂಭ್ರಮದ ಪ್ರಮಾಣವನ್ನು ಎತ್ತಿ ತೋರಿಸುತ್ತಿದೆ.



ಹೈದರಾಬಾದ್‌ನಲ್ಲಿ ಗಣೇಶ ಚತುರ್ಥಿ ಹಬ್ಬದ ಅಂಗವಾಗಿ ನಡೆಯುವ ಲಡ್ಡು ಪ್ರಸಾದ ಹರಾಜು ಈ ಬಾರಿ ದಾಖಲೆ ನಿರ್ಮಿಸಿದೆ. ಬಂಡ್ಲಗುಡ್ಡಾದಲ್ಲಿನ 'ಕೀರ್ತಿ ರಿಚ್ಮಂಡ್ ವಿಲ್ಲಾ'ದ ಗಣೇಶ ಮಹೋತ್ಸವದಲ್ಲಿನ ಪ್ರಸಾದದ ಲಡ್ಡು ಸೋಮವಾರ ರಾತ್ರಿ 1.87 ಕೋಟಿ ರು.ಗೆ ಹರಾಜಾಗಿದೆ. ಕಳೆದ ವರ್ಷಕ್ಕಿಂತ ಈ ಬಾರಿ 60 ಲಕ್ಷ ರು. ಅಧಿಕ ಬೆಲೆಗೆ ಹರಾಜಾಗಿದೆ. ಇದು ಗಣೇಶೋತ್ಸವ ಆಯೋಜಕರು ಮತ್ತು ಭಕ್ತರಲ್ಲಿ ಹರುಷ ಉಂಟು ಮಾಡಿದೆ. 1.87 ಕೋಟಿ ರು. ನೀಡಿ ಲಡ್ಡು ಪ್ರಸಾದ ಖರೀದಿಸಿದವರು ಯಾರು? ಎಂಬ ಮಾಹಿತಿಯನ್ನು ಗಣೇಶೋತ್ಸವ ಮಂಡಳಿಯವರು ಸದ್ಯ ಬಹಿರಂಗಗೊಳಿಸಿಲ್ಲ. ಹೀಗೆ ಲಡ್ಡು ಪ್ರಸಾದ ಹರಾಜಿನಿಂದ ಬರುವ ಹಣವನ್ನು ಪ್ರತಿವರ್ಷ ವಿವಿಧ ಸೇವಾ ಕಾರ್ಯಗಳಿಗೆ ಬಳಸಲಾಗುತ್ತದೆ. ಇನ್ನೊಂದೆಡೆ ಬಾಲಾಪುರದಲ್ಲಿನ ಗಣೇಶ ಲಡ್ಡು ಪ್ರಸಾದವೂ 30.01 ಲಕ್ಷ ರು.ಗೆ ಮಾರಾಟವಾಗಿದೆ. ಇದು 3 ದಶಕಗಳಲ್ಲೇ ಅಧಿಕ ಹರಾಜು ಮೊತ್ತವಾಗಿದೆ. ಕಳೆದ ಬಾರಿ 27 ಲಕ್ಷ ರು.ಗೆ ಇಲ್ಲಿನ ಲಡ್ಡು ಪ್ರಸಾದ ಮಾರಾಟವಾಗಿತ್ತು.

## ಕೇರಳದಲ್ಲಿ ಶಂಕಿತ ಮಂಕಿಪಾಕ್ಸ್ ಪತ್ತೆ




**ಮಲ್ಲಪುರಂ:** ದುಬೈನಿಂದ ಕೇರಳಕ್ಕೆ ಬಂದಿದ್ದ ವ್ಯಕ್ತಿಯಲ್ಲಿ ಶಂಕಿತ ಮಂಕಿಪಾಕ್ಸ್ ಸೋಂಕು ಪತ್ತೆಯಾಗಿದೆ. ಆತನ ಮೇಲೆ ತೀವ್ರ ನಿಗಾ ಇಡಲಾಗಿದೆ. ಮಲ್ಲಪುರಂನ 38 ವರ್ಷದ ವ್ಯಕ್ತಿಯ ಮಂಜೇರಿ ಆಸ್ಪತ್ರೆಯಲ್ಲಿ ತೀವ್ರ ಜ್ವರಕ್ಕೆ ಚಿಕಿತ್ಸೆಗೆಂದು ಹೋದಾಗ ವೈದ್ಯರು ಆತನ ದೇಹದ ಮೇಲೆ ಗುಳ್ಳೆಗಳನ್ನು ಗಮನಿಸಿದ್ದು ಮಂಕಿಪಾಕ್ಸ್ ಲಕ್ಷಣಗಳಿರಬಹುದು ಎಂದು ಶಂಕಿಸಿದರು. ವ್ಯಕ್ತಿಯ ರಕ್ತದ ಮಾದರಿ ಕೊಝಿಕ್ಕೋಡ್ ವೈದ್ಯಕೀಯ ಆಸ್ಪತ್ರೆಗೆ ತಪಾಸಣೆಗೆ ಕಳುಹಿಸಿದ್ದು ವರದಿ ನಿರೀಕ್ಷಿಸಲಾಗಿದೆ. ಯುಎಇನಲ್ಲಿ ಈಗಾಗಲೇ ಕೆಲವು ಮಂಕಿಪಾಕ್ಸ್ ಪ್ರಕರಣಗಳು ವರದಿಯಾಗಿವೆ. ಹೀಗಾಗಿ ಆತಂಕ ಹೆಚ್ಚಿಸಿದೆ.